**ಕರ್ನಾಟಕ ಸರ್ಕಾರ**

**ಸಂಖ್ಯೆ:** ಸಿಆಸುಇ 149 ಎಸ್‌ಸಿಇ 2025

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಡಾ: ಬಿ. ಆರ್. ಅಂಬೇಡ್ಕರ್ ವೀಧಿ
ಬೆಂಗಳೂರು, ದಿನಾಂಕ:26.05.2026.

**ಅಧಿಸೂಚನೆ**

ಲೋಕೋಪಯೋಗಿ ಇಲಾಖೆಯ ಸೇವೆಗೆ ಸೇರಿರುವ ಈ ಕೆಳಕಂಡ ಅಧೀಕ್ಷಕ ಅಭಿಯಂತರರು ವೃಂದದ ಅಧಿಕಾರಿಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ **ವೇತನ ಶ್ರೇಣಿ ರೂ.1,44,700-1,97,200/-ರ ಮುಖ್ಯ ಅಭಿಯಂತರರ ವೃಂದದಲ್ಲಿ** ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು, ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳ ನಿಯಮ 32 ರಡಿ ಸ್ವತಂತ್ರ ಪ್ರಭಾರದಲ್ಲಿರಿಸಿ ಆಡಳಿತಾತ್ಮಕ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಮುಂದಿನ ಆದೇಶದವರೆಗೆ ಅವರುಗಳ ಹೆಸರಿನ ಮುಂದೆ ನಮೂದಿಸಿರುವ ಹುದ್ದೆಗಳಿಗೆ ಸ್ಥಳನಿಯುಕ್ತಿಗೊಳಿಸಿ ಆದೇಶಿಸಿದೆ:-

| **ಕ್ರಮ ಸಂಖ್ಯೆ** | **ಅಧಿಕಾರಿಯವರ ಹೆಸರು ಮತ್ತು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹುದ್ದೆ** | **ನಿಯಮ 32 ರಡಿ ಸ್ವತಂತ್ರ ಪ್ರಭಾರದಲ್ಲಿರಿಸಿ ಸ್ಥಳ ನಿಯುಕ್ತಿಗೊಳಿಸಲಾದ ಹುದ್ದೆ** |
|---|---|---|
| 1. | **ಶ್ರೀ ಮಾಲತೇಶ ಆರ್.,** ಅಧೀಕ್ಷಕ ಅಭಿಯಂತರರು , ಯೋಜನಾ ಅನುಷ್ಠಾನ ಘಟಕ, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ. ಕೆ.ಆರ್. ವೃತ್ತ, ಬೆಂಗಳೂರು. | **ಮುಖ್ಯ ಅಭಿಯಂತರರು,** ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ,(KRDCL) ಬೆಂಗಳೂರು - ಖಾಲಿ ಹುದ್ದೆಗೆ. |
| 2. | **ಶ್ರೀ ಬಿ.ವೈ. ಬಂಡಿವಡ್ಡರ್,** ಅಧೀಕ್ಷಕ ಅಭಿಯಂತರರು, (ಪ್ರಾಧ್ಯಾಪಕರು) ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ (ವಾಲ್ಮಿ) , ಧಾರವಾಡ | **ಮುಖ್ಯ ಅಭಿಯಂತರರು,(ಪ್ರಾಧ್ಯಾಪಕರು)** ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ( ವಾಲ್ಮಿ) ಧಾರವಾಡ - **ಪ್ರಸ್ತುತ ಇರುವ ಪ್ರಾಧ್ಯಾಪಕರು (ಅಧೀಕ್ಷಕ ಅಭಿಯಂತರರು) ಹುದ್ದೆಯನ್ನು ತಾತ್ಕಾಲಿಕವಾಗಿ ಮುಖ್ಯ ಅಭಿಯಂತರರ ಹುದ್ದೆಗೆ** ಉನ್ನತೀಕರಿಸಿ ಹಾಗೆ ಉನ್ನತೀಕರಿಸಿದ ಹುದ್ದೆಗೆ ನೇಮಿಸಿದೆ.<br><br>**ದಿನಾಂಕ:01.06.2026 ರಿಂದ ಜಾರಿಗೆ ಬರುವಂತೆ** ರಾಷ್ಟ್ರೀಯ ಹೆದ್ದಾರಿಗಳು (ಉತ್ತರ ವಲಯ), ಲೋಕೋಪಯೋಗಿ ಇಲಾಖೆ, ಬೆಳಗಾವಿ ಇಲ್ಲಿ ಮುಖ್ಯ ಅಭಿಯಂತರರು, ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ ಮನ್ಮಥಯ್ಯ ಎಂ.ಸ್ವಾಮಿ , ಇವರು ದಿನಾಂಕ:31.05.2026 ರಂದು ವಯೋನಿವೃತ್ತಿ ಇಂದ ತೆರವಾಗುವ ಹುದ್ದೆಗೆ ವರ್ಗಾಯಿಸಿದೆ. |
| 3. | **ಶ್ರೀ ಸುಭಾಷ್ ಎಲ್ ಲಾಲಪ್ಪ.** ಅಧೀಕ್ಷಕ ಅಭಿಯಂತರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವೃತ್ತ, ಕಲಬುರಗಿ | **ಮುಖ್ಯ ಅಭಿಯಂತರರು ,** ಸಂಪರ್ಕ ಮತ್ತು ಕಟ್ಟಡಗಳು (ಈಶಾನ್ಯ), ಲೋಕೋಪಯೋಗಿ ಇಲಾಖೆ, ಕಲಬುರಗಿ- ಖಾಲಿ ಹುದ್ದೆಗೆ |

..2

prabhavaa.com

| | | |
|---|---|---|
| 4. | **ಶ್ರೀ ಅಭಿಮನ್ಯ ಕೆ.ಎಸ್**<br>ಅಧೀಕ್ಷಕ ಅಭಿಯಂತರರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಅಣೆಕಟ್ಟು ವೃತ್ತ, ಆಲಮಟ್ಟಿ, ವಿಜಯಪುರ | **ಮುಖ್ಯ ಅಭಿಯಂತರರು ,**<br>ಕಾಲುವೆ ವಲಯ-1, ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ, ಭೀಮರಾಯನಗುಡಿ, ಶಹಾಪುರ ತಾಲ್ಲೂಕು, ಯಾದಗಿರಿ ಜಿಲ್ಲೆ, -ಖಾಲಿ ಹುದ್ದೆಗೆ |
| 5. | **ಶ್ರೀ ಅನಿಲ್ ರಾಜ್ ಜಿ.ಎನ್**<br>ಅಧೀಕ್ಷಕ ಅಭಿಯಂತರರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ನಾಬದಂಕಾ ವೃತ್ತ ಸಂಖ್ಯೆ=2, ಕೃಷ್ಣಾಪುರ, ಸುರಪುರ, ಯಾದಗಿರಿ | **ಆಡಳಿತಾಧಿಕಾರಿಗಳು,(ಮುಖ್ಯ ಅಭಿಯಂತರರು)**<br>ಕೃಷ್ಣಾ ಕಾಡಾ, ಭೀಮರಾಯನಗುಡಿ ಶಹಾಪುರ ತಾ\|\| ಯಾದಗಿರಿ ಜಿಲ್ಲೆ- ಖಾಲಿ ಹುದ್ದೆಗೆ |
| 6. | **ಶ್ರೀ ಶರ್ಮಾ ಎಲ್. ಸುರೇಶ್,**<br>ಅಧೀಕ್ಷಕ ಅಭಿಯಂತರರು, (ವಿನ್ಯಾಸ) ಸಂಪರ್ಕ ಮತ್ತು ಕಟ್ಟಡಗಳು ( ಈಶಾನ್ಯ) ಲೋಕೋಪಯೋಗಿ ಇಲಾಖೆ, ಕಲಬುರಗಿ | **ಆಡಳಿತಾಧಿಕಾರಿಗಳು,(ಮುಖ್ಯ ಅಭಿಯಂತರರು)**<br>ಕಾಡಾ, ಕಲಬುರಗಿ |
| 7. | **ಶ್ರೀ ಗಣೇಶ್ ಎಸ್,**<br>ಅಧೀಕ್ಷಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಶಿವಮೊಗ್ಗ ವೃತ್ತ, ಶಿವಮೊಗ್ಗ. | **ಮುಖ್ಯ ಅಭಿಯಂತರರು,**<br>ಸಂಪರ್ಕ ಮತ್ತು ಕಟ್ಟಡಗಳು (ಕೇಂದ್ರ), ಶಿವಮೊಗ್ಗ-ಶ್ರೀ ಜಗದೀಶ್ ಬಿ.ವಿ. ಇವರ ಜಾಗಕ್ಕೆ |
| 8. | **ಶ್ರೀ ಜನಾರ್ಧನ್.ಹೆಚ್ .ಎಂ,**<br>ಅಧೀಕ್ಷಕ ಅಭಿಯಂತರರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು, ಸಮಾಜ ಕಲ್ಯಾಣ ಇಲಾಖೆ | **ಮುಖ್ಯ ಅಭಿಯಂತರರು,**<br>ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು, ಸಮಾಜ ಕಲ್ಯಾಣ ಇಲಾಖೆ - **ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಅಧೀಕ್ಷಕ ಅಭಿಯಂತರರು ಹುದ್ದೆಯನ್ನು ತಾತ್ಕಾಲಿಕವಾಗಿ ಮುಖ್ಯ ಅಭಿಯಂತರರ ಹುದ್ದೆಗೆ ಉನ್ನತೀಕರಿಸಿ ಹಾಗೆ ಉನ್ನತೀಕರಿಸಿದ ಹುದ್ದೆಗೆ ನೇಮಿಸಿದೆ.** |
| 9. | **ಶ್ರೀ ಮನೋಜ್ ಕುಮಾರ್ ಗಡಬಳ್ಳಿ,**<br>ಅಧೀಕ್ಷಕ ಅಭಿಯಂತರರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ನಿಮಪೋ, ವೃತ್ತ-2, ರಾಂಪೂರ ಸಿಂದಗಿ. | **ಮುಖ್ಯ ಅಭಿಯಂತರರು,**<br>ನೀರಾವರಿ ಕೇಂದ್ರ ವಲಯ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಮುನಿರಾಬಾದ್, ಕೊಪ್ಪಳ-ಖಾಲಿ ಹುದ್ದೆಗೆ |
| 10. | **ಶ್ರೀ ಸತೀಶ್ ಕುಮಾರ್ ಎಸ್,**<br>ಅಧೀಕ್ಷಕ ಅಭಿಯಂತರರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ. | **ಮುಖ್ಯ ಅಭಿಯಂತರರು,**<br>ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಬೆಂಗಳೂರು- ಖಾಲಿ ಹುದ್ದೆಗೆ |
| 11. | **ಶ್ರೀಮತಿ ಸುವರ್ಣ ಮೋಹನ್ ರಾವ್ ದೊಡ್ಡಮನಿ,**<br>ಅಧೀಕ್ಷಕ ಅಭಿಯಂತರರು, ಕರ್ನಾಟಕ ಜಲಸಾರಿಗೆ ಮಂಡಳಿ, ಕಾರವಾರ | **ಮುಖ್ಯ ಅಭಿಯಂತರರು,**<br>ಕರ್ನಾಟಕ ಜಲಸಾರಿಗೆ ಮಂಡಳಿ, ಬೆಂಗಳೂರು, ( ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆ) - ಖಾಲಿ ಹುದ್ದೆಗೆ |

..3

prabhavaa.com

| | | |
|---|---|---|
| 12. | **ಶ್ರೀಮತಿ ಲಲಿತಾ ಬಿ,**<br>ಅಧೀಕ್ಷಕ ಅಭಿಯಂತರರು,<br>( ತಾಂತ್ರಿಕ ಮತ್ತು ಜಾಗೃತಿ ಕೋಷ)<br>ಗ್ರೇಟರ್ ಬೆಂಗಳೂರು ಪ್ರಾಧಿಕಾರ. | **ಮುಖ್ಯ ಅಭಿಯಂತರರು,**<br>ಗ್ರೇಟರ್ ಬೆಂಗಳೂರು ಪ್ರಾಧಿಕಾರ,<br>ಬೆಂಗಳೂರು- ಖಾಲಿ ಹುದ್ದೆಗೆ |
| 13. | **ಶ್ರೀ ಮೋಹನ್ ಕುಮಾರ್ ಸಿ.ಆರ್,**<br>ಅಧೀಕ್ಷಕ ಅಭಿಯಂತರರು,<br>ಲೋಕೋಪಯೋಗಿ ಇಲಾಖೆ ,<br>ಕಟ್ಟಡಗಳ ವೃತ್ತ, ಕೆ.ಆರ್. ವೃತ್ತ.<br>ಬೆಂಗಳೂರು. | **ಮುಖ್ಯ ಅಭಿಯಂತರರು,**<br>ರಾಜೀವ ಗಾಂಧಿ ವಸತಿ ನಿಗಮ ನಿಯಮಿತ,<br>ಬೆಂಗಳೂರು - ಖಾಲಿ ಹುದ್ದೆಗೆ |
| 14. | **ಶ್ರೀ ಕೇಶವ್ ಪ್ರಸಾದ್ ಬಿ.ಎನ್,**<br>ಅಧೀಕ್ಷಕ ಅಭಿಯಂತರರು,<br>ಲೋಕೋಪಯೋಗಿ ಇಲಾಖೆ ,<br>ಮೈಸೂರು ವೃತ್ತ, ಮೈಸೂರು | ಸರ್ಕಾರದಲ್ಲಿ ವರದಿ ಮಾಡಿಕೊಳ್ಳಲು ಸೂಚಿಸಿದೆ.<br><br>ದಿನಾಂಕ:30.06.2026 ರಿಂದ ಜಾರಿಗೆ ಬರುವಂತೆ ಮುಖ್ಯ ಅಭಿಯಂತರರು, ಇಂಜಿನಿಯರಿಂಗ್ ಘಟಕ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆರೋಗ್ಯ ಸೌಧ, ಬೆಂಗಳೂರು ಇಲ್ಲಿ ಮುಖ್ಯ ಅಭಿಯಂತರರು, ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ ಮುಕ್ಕಣ್ಣ ನಾಯಕ ಜೆ.ಆರ್. ,ಇವರು ದಿನಾಂಕ:30.06.2026 ರಂದು ವಯೋನಿವೃತ್ತಿ ಇಂದ ತೆರವಾಗುವ ಹುದ್ದೆಗೆ ಸ್ಥಳನಿಯುಕ್ತಿಗೊಳಿಸಿದೆ. |
| 15. | **ಶ್ರೀ ರಾಜೇಶ್ ಎಂ.ಆರ್.**<br>ಅಧೀಕ್ಷಕ ಅಭಿಯಂತರರು,<br>ರಾಷ್ಟ್ರೀಯ ಹೆದ್ದಾರಿ ವೃತ್ತ,<br>ಬೆಂಗಳೂರು | **ಮುಖ್ಯ ಅಭಿಯಂತರರು,**<br>ರಾಷ್ಟ್ರೀಯ ಹೆದ್ದಾರಿಗಳು,<br>ಬೆಂಗಳೂರು |

prabhavaa.com

ಶ್ರೀ ಜಗದೀಶ್ ಬಿ.ವಿ, ಮುಖ್ಯ ಅಭಿಯಂತರರು, ಜಲಸಂಪನ್ಮೂಲ ಇಲಾಖೆ ಇವರು ಮುಂದಿನ ಸ್ಥಳ ನಿಯುಕ್ತಿಗಾಗಿ ಸರ್ಕಾರದಲ್ಲಿ ವರದಿ ಮಾಡಿಕೊಳ್ಳಲು ಸೂಚಿಸಿದೆ.

**<u>ಷರತ್ತು ಮತ್ತು ನಿಬಂಧನೆಗಳು:</u>**

1. ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳ ನಿಯಮ 32ರಡಿ ಮಾಡಲಾಗುವ ಸ್ವತಂತ್ರ ಪ್ರಭಾರ ವ್ಯವಸ್ಥೆಯು ಕ್ರಮಬದ್ಧ ಮುಂಬಡ್ತಿ ಬದಲಿಗೆ ಮಾಡುವ ಒಂದು ತಾತ್ಕಾಲಿಕ ವ್ಯವಸ್ಥೆಯಾಗಿದೆ. ಅದು ಮುಂಬಡ್ತಿ ಅಲ್ಲ. ಸ್ವತಂತ್ರ ಪ್ರಭಾರದಲ್ಲಿರಿಸಿರುವ ಆದೇಶವನ್ನು ಯಾವುದೇ ಸಂದರ್ಭದಲ್ಲಾದರೂ ಹಿಂದಕ್ಕೆ ಪಡೆಯಲು ಆಸ್ಪದವಿರುತ್ತದೆ.

2. ಈ ಸ್ವತಂತ್ರ ಪ್ರಭಾರ ವ್ಯವಸ್ಥೆಯು ತಾತ್ಕಾಲಿಕವಾಗಿದ್ದು ಭವಿಷ್ಯತ್ತಿನಲ್ಲಿ ಪೂರ್ವಾನ್ವಯ ಮುಂಬಡ್ತಿಗೆ ಹಕ್ಕೊತ್ತಾಯ ಮಾಡುವಂತಿಲ್ಲ.

3. ಸ್ವತಂತ್ರ ಪ್ರಭಾರದಲ್ಲಿರಿಸಿದ ಅಧಿಕಾರಿಯು ಮುಖ್ಯ ಇಂಜಿನಿಯರ್ ವೃಂದದಲ್ಲಿ ಜೇಷ್ಠತೆಗೆ ಅರ್ಹರಿರುವುದಿಲ್ಲ.

4. ಈ ಸ್ವತಂತ್ರ ಪ್ರಭಾರ ವ್ಯವಸ್ಥೆಯು ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯು ಅರ್ಜಿ ಸಂಖ್ಯೆ:2431-2435 ಮತತು 2486-2490/2020 ದಿನಾಂಕ:26.05.2023 ಮತ್ತು ಅರ್ಜಿ ಸಂ:3698-3711/2022ರಲ್ಲಿ ದಿನಾಂಕ:12.12.2023 ರಂದು ನೀಡಿರುವ ತೀರ್ಪಿನ ಮೇಲೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂ:23371/2023, 7440/2024 ಮತ್ತು 7824/2024 ಮತ್ತು ಬಾಕಿ ಉಳಿದಿರುವ ಯಾವುದೇ ನ್ಯಾಯಾಲಯ ಪ್ರಕರಣಗಳ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ.

5. ಲಭ್ಯವಿರುವ ಸೇರುವಿಕೆ ಕಾಲಾವಧಿಯ ಒಳಗಾಗಿ ಸ್ಥಳನಿಯುಕ್ತಿಗೊಳಿಸಲಾದ ಹುದ್ದೆಯ ಪ್ರಭಾರವನ್ನು ವಹಿಸಿಕೊಂಡು ಪ್ರಭಾರ ವರ್ಗಾವಣೆ ಪ್ರಮಾಣ ಪತ್ರದ ಪ್ರತಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

6. ಸ್ಥಳನಿಯುಕ್ತಿಗೊಂಡ ಅಧಿಕಾರಿಯನ್ನು ಅವರು ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಯಿಂದ ಬಿಡುಗಡೆಗೊಳಿಸದಿದ್ದಲ್ಲಿ ಅಥವಾ ಸ್ಥಳ ನಿಯುಕ್ತಿಗೊಂಡ ಹುದ್ದೆಯಲ್ಲಿ ಅವರುಗಳನ್ನು ಕಾರ್ಯವರದಿ ಮಾಡಿಸಿಕೊಳ್ಳದಿದ್ದಲ್ಲಿ, ಸಂಬಂಧಪಟ್ಟ ಮೇಲಾಧಿಕಾರಿಗಳನ್ನು ನೇರವಾಗಿ ಜವಾಬ್ದಾರರನ್ನಾಗಿಸಲಾಗುವುದು.

7. ಮುಖ್ಯ ಇಂಜಿನಿಯರ್ ಹುದ್ದೆಯಲ್ಲಿ ಸ್ವತಂತ್ರ ಪ್ರಭಾರದಲ್ಲಿರಿಸಲಾದ ಅಧಿಕಾರಿಗಳು ನಿಯಮಾನುಸಾರ ಪ್ರಭಾರ ಭತ್ಯೆಗೆ ಅರ್ಹರಿರುತ್ತಾರೆ.

prabhavaa.com

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

26/5/26

**(ನಾಗಪ್ಪ ಎಸ್. ಪರೀಟ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವೆಗಳು-3).

26/5/26

**ಇವರಿಗೆ,**

1. ಪ್ರಧಾನ ಮಹಾಲೇಖಪಾಲರು, (ಜಿ&ಎಸ್. ಎ)/ (ಇ & ಆರ್. ಎಸ್. ಎ) ಕರ್ನಾಟಕ ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-01.
2. ಪ್ರಧಾನ ಮಹಾಲೇಖಪಾಲರು, (ಎ ಮತ್ತು ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು-01
3. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
5. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.

6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ/ ಜಲಸಂಪನ್ಮೂಲ ಇಲಾಖೆ/ ನಗರಾಭಿವೃದ್ಧಿ ಇಲಾಖೆ/ ಲೋಕೋಪಯೋಗಿ ಇಲಾಖೆ/ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,/ಸಮಾಜ ಕಲ್ಯಾಣ ಇಲಾಖೆ/ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ/ ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆ/ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಕಾಸಸೌಧ, ಬೆಂಗಳೂರು.
7. ಮುಖ್ಯ ಆಯುಕ್ತರು , ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಬೆಂಗಳೂರು.
8. ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನಸೌಧ, ಬೆಂಗಳೂರು.
9. ಸರ್ಕಾರದ ಜಂಟಿ ಕಾರ್ಯದರ್ಶಿ, ಸಿ.ಆ.ಸು. ಇಲಾಖೆ (ಸೇವೆಗಳು), ವಿಧಾನಸೌಧ, ಬೆಂಗಳೂರು.
10. ಮಾನ್ಯ ಉಪ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
11. ಮಾನ್ಯ ಲೋಕೋಪಯೋಗಿ ಇಲಾಖಾ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
12. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ,(KRDCL) ಬೆಂಗಳೂರು.
13. ವ್ಯವಸ್ಥಾಪಕ ನಿರ್ದೇಶಕರು, ರಾಜೀವ ಗಾಂಧಿ ವಸತಿ ನಿಗಮ ನಿಯಮಿತ, ಬೆಂಗಳೂರು.
14. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
15. ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ, ಬೆಂಗಳೂರು.
16. ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡ(ದ), ಕೆ.ಆರ್.ವೃತ್ತ, ಬೆಂಗಳೂರು-560 001.
17. ಖಜಾನೆ ಆಯುಕ್ತರು, ಖಜಾನೆ ಆಯುಕ್ತಾಲಯ, 6ನೇ ಮಹಡಿ, ಕೆ.ಪಿ. ಸಿ, ಎಲ್ ಗ್ರೀನ್ ಬಿಲ್ಡಿಂಗ್, ಅರಮನೆ ರಸ್ತೆ, ಬೆಂಗಳೂರು-560001.
18. ಸಂಬಂಧಪಟ್ಟ ಅಧಿಕಾರಿಗಳು.
19. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

prabhavaa.com